ಮಾಡಿರುವುದು ಅಕೃತ್ಯವಾದುದು. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಇದೆಲ್ಲವನ್ನೂ ಪರಿಶೀಲನೆ ಮಾಡಿ ಉತ್ತರ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಇದರ ಬಗ್ಗೆ ಪೂರ್ತಿ ಡಿಟೇಲ್ಸ್ ಹೇಳಿದ್ದೇನೆ. ಪೋಲೀಸಿನವರು ತಕ್ಕ ಸಮಯದಲ್ಲಿ ಕ್ರಮ ತೆಗೆದುಕೊಂಡು ಅಲ್ಲಿ ಶಾಂತಿ ಪರಿಸ್ಥಿತಿಯನ್ನು ತಂದಿದ್ದಾರೆ. ಒಂದು ಕೋಮಿನವರ ಮೇಲೆ ಮಾತ್ರ ಕೇಸನ್ನು ಹಾಕಿದ್ದಾರೆಂದು ಮಾನ್ಯ ಶ್ರೀ ರಾಮ್ ದೇವ್ ರವರು ಮತ್ತು ಶ್ರೀ ಬಸವಲಿಂಗಪ್ಪನವರು ಹೇಳಿದ್ದಾರೆ. ಆದರೆ ಅಲ್ಲಿ ನಡೆದದ್ದು ಒಂದು ಕೋಮಿನವರಿಗೇ ಸಂಬಂಧಪಟ್ಟಿದ್ದು. ಬೇರೆ ಕೋಮಿನವರು ಯಾರೂ ಗಲಾಟೆ ಮಾಡಿಲ್ಲ. ಅವರು ಯಾವ ತರಹವಲ್ಲಿಯೂ ಇನ್‌ವಾಲ್ವ್ ಆಗಿಲ್ಲ. ಆದುದರಿಂದ ಪೋಲೀಸಿನವರು ಅಲ್ಲಿಗೆ ಹೋದಾಗ ಅಲ್ಲಿ ಗಲಾಟೆಗೆ ಯಾರು ಯಾರು ಕಾರಣಕರ್ತರಾಗಿದ್ದರೋ ಅವರನ್ನು ಹಿಡಿದು ಅವರ ಮೇಲೆ ಕೇಸ್ ಹಾಕಿದ್ದಾರೆ ಅಷ್ಟೇ.

ಶ್ರೀ ಪಿ. ರಾಮ್‌ದೇವ್.—ಡೇವಿಡ್ ಸತ್ತನಲ್ಲ ಯಾರವನು ?

ಶ್ರೀ ಆರ್. ಗುಂಡೂರಾವ್.—ಡೇವಿಡ್ ಆ ಗಲಾಟೆ ನಡೆಯುವಾಗ ಅವನು ಪಾರ್ಕ್‌ನಲ್ಲಿ ಮಲಗಿದ್ದ ಹಂತೆ. ಆದುದರಿಂದ ಈ ವಿಷಯದಲ್ಲಿ ಮಾನ್ಯ ಶ್ರೀ ಗಂಗಾಧರನ್ ರವರು ಹೇಳಿದ ಹಾಗೆ ಜಾತಿ ಬಣ್ಣ ಕೊಡುವುದು ಬೇಡ. ಅಲ್ಲಿ ಜಾತಿ ಗಲಾಟೆ ಏನೂ ನಡೆದಿಲ್ಲ. ಆದುದರಿಂದ ಈಗ ಅಲ್ಲಿ ಶಾಂತಿ ಸ್ಥಾಪನೆ ಮಾಡಲಾಗಿದೆ. ಆ ಶಾಂತಿ ಸಮಿತಿಯಲ್ಲಿ ಇನ್ನು ಯಾವನ್ನು ಹಾಕಬೇಕೋ ಅವನ್ನು ಹಾಕಿ ಕಾನೂನು ಬಂದೋ ಬಸ್ತು ಮಾಡಲಾಗಿದೆ. ಆದುದರಿಂದ ಇಲ್ಲಿಗೆ ಆ ವಿಷಯವನ್ನು ಬಿಡೋಣ. ಮತ್ತೆ ಸನ್ಮಾನ್ಯ ಸದಸ್ಯರಾದ ಶ್ರೀ ರಾಜು ಗೌಡರವರು ಕೇಳಿರತಕ್ಕ ಪ್ರಶ್ನೆ ಏನೆಂದರೆ ಕೊಳ್ಳೇಗಾಲ ಬಪಳ ದೊಡ್ಡದಾಗಿದೆ ಅಲ್ಲಿಗೆ ಒಬ್ಬ ಡಿ.ವೈ.ಎಸ್.ಪಿ ಹಾಕಬೇಕೆಂದು ಹೇಳಿದ್ದಾರೆ ಅವರ ಬಗ್ಗೆ ಮಾಹಿತಿಯನ್ನು ತರಿಸಿ ನೋಡಿ ಅದರ ಬಗ್ಗೆ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆ.

ಶ್ರೀ ಪಿ. ರಾಮ್‌ದೇವ್.—ಸ್ವಾಮಿ, ಅಲ್ಲಿ ಯಾರೋ ಒಬ್ಬ ಮಾಜಿ ಮಂತ್ರಿಗಳು ಕೋಮು ಪರ್ಷಣೆಗೆ ಪ್ರಚೋದನೆ ಮಾಡಿದರು ಅಂತ ಕೇಳಿ ಬಂದಿದೆ, ಅವರ ಮೇಲೆ ಏನು ಕ್ರಮವನ್ನು ತೆಗೆದು ಕೊಳ್ಳುತ್ತೀರಿ ?

ಶ್ರೀ ಆರ್. ಗುಂಡೂರಾವ್.—ಆ ರೀತಿಯಾಗಿ ಪತ್ರಿಕೆಗಳಲ್ಲಿ ಬಂದಿರಬಹುದು, ಆದರೆ ನಮ್ಮ ಸರ್ಕಾರದ ಮಾಹಿತಿಯಲ್ಲಿ ಇಲ್ಲ ಆದುದರಿಂದ ತಾವು ಹೇಳುವ ರೀತಿಯಲ್ಲಿ ಯಾರು ಯಾರು ಮಾಜಿ ಮಂತ್ರಿಗಳು ಅಲ್ಲಿಗೆ ಹೋಗಿದ್ದರೋ ಎಂಬುದನ್ನು ನೋಡಿ ಹೇಳೋಣ.

MATTER UNDER RULE 312

re : **Unemployment of 15,000 power loom workers in Belgaum District.**

SRI B.B. SAYANAK —Mr. Chairman Sir, I had given a notice on 1st June 1980 Power Loom workers at Belgaum. There are about fifteen thousand power loom workers in Belgaum and they were on strike. After 2 or 3 months, the Management declared a lock-out of the factories. A notification had been issued by the then Chief Minister Sri D. Devaraj Urs regarding minimum wages, but art-silk-cum-cotton minimum wages had not been included in the notification. In Belgaum, the power loom owners are manufacturing artsilk-cum-cotton minimum wages-saries. As there was no mention about art silk-cum-cotton minimum wages in the notification, trouble started between the Management and the Workers The present Labour Minister as per his promise visited Belgaum and convened a meeting of the Manage-

ment and the workers and I was also present in that meeting. I my self stated in that meeting that there was a loophole in the notification and therefore, theremust be an agreement between the Management and the workers. TheManagement offered cent percent increase in the wages, but the workers are insisting that they want the minimum wages only the Management says that there is a loophole in the notification, they have gone to the Court and that they are not going to give the minimum wages.

Sir, about fifteen thousand power-loom workers are on the streets today. When Belgaum was in Maharashtra, there was the piece-work system and the Management are willing to adopt that system but the workers are not ready to accept that proposal. There is a deadlock as the Management have declared a lock-out.

Similarly, there is the Aluminium Factory near Belgaum and in that factory also there is a lock-out. This factory is paying Rs. 50 to 60 lakhs per month to the State Government and about one Crore to the Central Government and in that factory also there is a dead lock. I do not know why the Government of Karnataka is not intervening by calling a meeting of the workers and the Management to settle the issue.

When the Chief Minister visited Belgaum on 1st June 1980, the workers wanted to demonstrate and there was a peaceful demonstration of the workers of both the power-loom factory and the Aluminium Factory and the Leaders met the Chief Minister. The Chief Minister told them that he is going to interve in the matter and settle the issue as early as possible. When the Chief Minister left the Circuit House at 3-15 p.m., five cars passed off and one lady fell down before the sixth car. If the lady had fallen down before the Chief Minister's car and if there was a lathi-charge it was alwright. The police version is that the workers threw stones. There was no Deputy Inspector General of Police or the Superintend of Police. They had left immediately after the Chief Minister left the Circuit House. But some police constables mercilessly lathi charged and one boy fell down and about fifteen policemen were beating that boy and even ladies were mercilessly and so many persons were arrested and taken to jail. Bicycles are seized such things should not happen. It is the duty of the Police to maintain law and order but they should not take revenge against the labourers. If they do that there will be labour agitation and a tense situation will be created in Belgaum. So I request the Government to intervene and settle the dispute between the Workers and the Managements of the Power-loom Factory and the Aluminium Factory.

೪-೦೦ ಪಿ.ಎಂ.

ಶ್ರೀ ಸಿ.ಎಂ. ಇಬ್ರಾಹಿಂ (ಕಾರ್ಮಿಕ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಏನು ರೂಲ್ ೩೧೨ರ ಕೆಳಗೆ ಪ್ರಸ್ತಾಪ ಮಾಡಿದ್ದಾರೆ....

SRI B.B. SAYANAK.—This is the injustice to me. Hon. Ministers can speak in English or Hindi, so that I can convince my people.

ಶ್ರೀ ಸಿ.ಎಂ. ಇಬ್ರಾಹಿಂ.—ಆಮೇಲೆ ಹೇಳುತ್ತೇನೆ. ಹಿಂದಿನ ಸರ್ಕಾರ ೧೯೭೯ನೇ ಡಿಸೆಂಬರ್‌ನಲ್ಲಿ ಒಂದು ಮಿನಿಮಂ ವೇಜಸ್ ಫಿಕ್ಸ್ ಮಾಡಿ ಒಂದು ಆಜ್ಞೆಯನ್ನು ಹೊರಡಿಸಿತ್ತು. ಆದರೂ ಕೂಡ ನಮ್ಮ ರಾಜ್ಯದ ಬಹು ಭಾಗಗಳಲ್ಲಿ (ಉದಾಹರಣೆಗೆ ಬೆಂಗಳೂರು, ದೊಡ್ಡಬಳ್ಳಾಪುರಗಳಲ್ಲಿ) ಮಿನಿಮಂ ವೇಜಸ್‌ಗಿಂತ ಜಾಸ್ತಿ ಕೊಡುತ್ತಿದ್ದಾರೆ. ಅದಕ್ಕೆ ನಮ್ಮದೇನು ಯಾವ ಆಭ್ಯಂತರವಿಲ್ಲ. ಆದರೆ ಬೆಳಗಾಂ, ಬನ ಹಟ್ಟಿಯಲ್ಲಿ ಈ ವಿವಾದ ತಲೆ ಎತ್ತಿರುವುದರಿಂದ ಇದರ ಬಗ್ಗೆ ಮ್ಯಾನೇಜ್‌ಮೆಂಟಿನವರನ್ನು ಕರೆದು ಮಾತ ನಾಡಿದಾಗ ಅವರು ಹೇಳಿದರು, ಗೊತ್ತುಪಡಿಸಿರುವ ಕ್ಕ ಸಂಬಳವೇ ಜಾಸ್ತಿಯಾಗಿದೆ, ಇನ್ನು ಅದಕ್ಕಿಂತ ಜಾಸ್ತಿ ಕೊಡುವುದಕಾಗುವುದಿಲ್ಲ ಎಂದು. ಆದರೆ ಪ್ರತಕ್ಕದ್ದು ಸಿಲ್ಕ್ ಆಲ್ಲ ಕಾಟನ್ ಅಲ್ಲ, ರಾ-ಸಿಲ್ಕ್ ಆಗಿರುವುದರಿಂದ ಅದನ್ನು ಪುನರ್ ಪರಿಶೀಲನೆ ಮಾಡಬೇಕಾಗಿದೆ. ಸರ್ಕಾರದ ನೀತಿ ಯಾವಾಗಲೂ ಕಾರ್ಮಿಕರ ಪರವಾಗಿ ಇರತಕ್ಕದ್ದಾಗಿದೆ. ಆ ಒಂದು ದೃಷ್ಟಿಯಿಂದ ಮಿನಿಮಂ ವೇಜಸ್ ಅನ್ನು ಫಿಕ್ಸ್ ಮಾಡಿ, ಯಾವ ಕೈಗಾರಿಕೆಗಳವರು ತನ್ನ ಕಾರ್ಮಿಕರಿಗೆ ಆ ಒಂದು ಕನಿಷ್ಟ ವೇತನವನ್ನು ಕೊಡುವುದಿಲ್ಲವೋ ಅಂಥವರ ವೆ ಲೆ ಕೇಸ್ ಹಾಕುವುದಕ್ಕೆ ಕಾನೂನಿನಲ್ಲಿ ಅವಕಾಶವಿದ್ದರಿಂದ ಕೆಲವರ ಮೇಲೆ ಕೇಸು ಗಳನ್ನು ಹಾಕಲಾಗಿದೆ. ಈ ಮಧ್ಯದಲ್ಲಿ ಕಾರ್ಮಿಕ ನಾಯಕರು ಬಂದು ವೇಜಸ್ ಫಿಕ್ಸ್ ಮಾಡಿರುವುದು ಜಾಸ್ತಿಯಾಗಿದೆ, ಆದ್ದರಿಂದ ಇದಕ್ಕೆ ಬೇರೊಂದು ಸಮಿತಿಯನ್ನು ಮಾಡಿ ಸರಿಪಡಿಸಬೇಕೆಂದು ಮನವಿ ಮಾಡಿದ್ದಾರೆ. ಅದಕ್ಕೆ ಈ ಸದನದ ಸದಸ್ಯರು ಒಪ್ಪಿದರೆ ಬಹುತೇಕವಾಗಿ ಆ ಬಗ್ಗೆ ವಿಚಾರ ಮಾಡು ತ್ತೇವೆ. ಮತ್ತು ಈ ಸಂಬಂಧದಲ್ಲಿ ಆ ಭಾಗದ ಶಾಸಕರ ಒಂದು ಸಭೆಯನ್ನು ಇದೇ ತಿಂಗಳ ೨೬ನೇ ತಾರೀಖಿನ ದಿವಸ ನನ್ನ ಛೇಂಬರ್‌ನಲ್ಲಿ ಕರೆದಿದ್ದೇನೆ. ಅವತ್ತಿನ ದಿವಸ ತಾವೆಲ್ಲರೂ ಬೆಳಗಾಂ ವಿಭಾಗದಲ್ಲಿ (ಆ ಒಂದು ಜಿಲ್ಲೆಯಲ್ಲಿ) ರಾ-ಸಿಲ್ಕ್ ಇರುವುದರಿಂದ ತಾತ್ಕಾಲಿಕವಾಗಿ ಮಿನಿಮಂ ವೇಜಸ್ ಏನಿದೆ ಇದನ್ನು ತಡೆಹಿಡಿಯಿರಿ ಎಂದು ಅಪೇಕ್ಷೆಪಟ್ಟರೆ ತಡೆಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೇವೆ. ಸರ್ಕಾರದ ಉದ್ದೇಶವಾದರೂ ಪವರ್ ಲೂಮ್ಸ್ ನಡೆಯಬೇಕು ಮತ್ತು ಕಾರ್ಮಿಕರಿಗೆ ಕೆಲಸ ಸಿಗಬೇಕೆಂಬುದಾಗಿದೆ. ಈ ಸಂದರ್ಭದಲ್ಲಿ ಪವರ್ ಲೂಮ್ಸ್ ಮಾಲೀಕರು ಮಿನಿಮಂ ವೇಜಸ್ ಫಿಕ್ಸ್ ಮಾಡಿರುವುದು ಜಾಸ್ತಿ ಯಾಗಿದೆ, ಅಷ್ಟು ವೇಜಸ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ, ತಾವುಗಳೇನು ಅವತ್ತಿನ ದಿವಸ ಉಪಯುಕ್ತವಾದ ಸಲಹೆಗಳನ್ನು ಕೊಡುತ್ತೀರೋ ನಿವುಗಳನ್ನು ಪರಿ ಶೀಲನೆ ಮಾಡೋಣ. ಇನ್ನು ಮಾನ್ಯ ಸಯನಕ್‌ರವರು ಇಂಡಾಲ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಆ ಬಗ್ಗೆ ನೋಟಿಸ್ ಬಂದಿಲ್ಲವಾದ್ದರಿಂದ ಪ್ರತ್ಯೇಕವಾಗಿ ನೋಟಿಸ್ ಕೊಟ್ಟರೆ ಮಾಹಿತಿ ತರಿಸಿಕೊಂಡು ಉತ್ತರ ಕೊಡುವುದಕ್ಕೆ ತಯಾರಿದ್ದೇನೆ. ಇನ್ನು ಲಾಟಿ ಚಾರ್ಜ್ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಅಲ್ಲಿ ಗಲಾಟೆ ನಡೆದು ಮುಳೆಯರ ಕಾರನ್ನು ಅಪೇಟೆಗರು ತಡೆಯಲು ಪ್ರಯತ್ನ ಮಾಡಿದಾಗ ಅವರನ್ನು ಸರಿಸಲು ಎರಡು ಜನ ಮಹಿಳಾ ಪೋಲೀಸರು ಪ್ರಯತ್ನ ಪಡುತ್ತಿರಲು ಬೇರೆಯವರು ಕಲ್ಲುಗಳನ್ನು ಬಿಸಲು ಶುರು ಮಾಡಿದರು. ಆಗ ಇತರೆ ಪೋಲೀಸರು ಕ್ರಮತೆಗೆದುಕೊಂಡಿದ್ದಾರೆ. ಆ ಸಂದರ್ಭದಲ್ಲಿ ೩-೪ ಜನ ಪೋಲೀಸರಿಗೆ ಮತ್ತು ಅನೇಕ ಖಾಸಗೀ ಜನರಿಗೆ ಗಾಯಗಳಾಗಿವೆ. ಆ ಪ್ರಕರಣದಲ್ಲಿ ೧೯ ಜನರನ್ನು ಬಂಧಿಸಿ ಕೇಸುಗಳನ್ನು ರಿಜಿಸ್ಟರ್ ಮಾಡಿಕೊಳ್ಳಲಾಗಿದೆ. ಈಗ ವಾತಾವರಣ ಶಾಂತವಾಗಿದೆ. ತಾವುಗಳು ಮಿನಿಮಂ ವೇಜಸ್ ಬಗ್ಗೆ ಏನು ಉತ್ತಮವಾದ ಸಲಹೆಗಳನ್ನು ಕೊಡುತ್ತೀರಿ ಆದರಂತೆ ಇವತ್ತು ನಾವು ಮಾಡುವುದಕ್ಕೆ ತಯಾರಾಗಿ ದ್ದೇವೆ. ಈ ಬಗ್ಗೆ ಕಾರ್ಮಿಕ ವರ್ಗದವರು ಮುಂದೆ ಬಂದು ಅವರಾಗಿಯೇ ಸರ್ಕಾರಕ್ಕೆ ಬರೆದು ಕೊಟ್ಟಿ ದ್ದಾರೆ. ಆದರೂ ನಾನು ಪಕ್ಕಕ್ಕೆ ಹಿಂಜರಿದೆ ಎಂದರೆ ಮಿನಿಮಂ ವೇಜಸ್ ಅನ್ನು ಆಬೆಯನ್ಸ್‌ನಲ್ಲಿಟ್ಟು ಮತ್ತೊಂದು ಸಮಿತಿಯನ್ನು ಮಾಡಿದರೆ ಸರ್ಕಾರವೇ ಕಾರ್ಮಿಕರಿಗೆ ವಿರೋಧವಾಗಿ ಮಾಡಿದೆ ಎಂಬ ದೂರು ಬಂದೀತೆಂಬ ಕಾರಣದಿಂದ ತಮ್ಮನ್ನು ಕೇಳಿ ಶೀರ್ಮಾನ ಮಾಡೋಣವೆಂದು ಹಾಗೇ ಇಟ್ಟಿದ್ದೇನೆ. ತಮ್ಮ ಉಪಯುಕ್ತವಾದ ಸಲಹೆಯಂತೆ ನಡೆದುಕೊಳ್ಳುವುದಕ್ಕೆ ಸರ್ಕಾರ ತಯಾರಾಗಿದೆ.